ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ನಿಜ

ಆ) ಬಂದಿದೆ

ಇ) ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಇಲ್ಲಿ ಉತ್ತಮ ರೀತಿಯ ಜಿಂಕೆ ಉದ್ಯಾನವನ್ನು ಪ್ರಾರಂಭ ಮಾಡಲು ಅರಣ್ಯ ಇಲಾಖೆ ಪರಿಶೀಲಿಸುತ್ತಿದೆ.

ಶರಾವತಿ ಯೋಜನೆಯಂಡಿಯಲ್ಲಿ ಮುಳುಗಡೆಯಾಗಲಿರುವ ಅರಣ್ಯ ಕ್ಷೇತ್ರ

೫೮೦. ಶ್ರೀ ಆರ್. ಎನ್. ನಾಯಕ್ (ಭಟ್ಕಳ).–ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶರಾವತಿ ಟೈಲರೇಸ್ ಯೋಜನೆಯಂಡಿಯಲ್ಲಿ ಮುಳುಗಡೆ ಆಗಲಿರುವ ಅರಣ್ಯ ಕ್ಷೇತ್ರವೆಷ್ಟು?

ಆ) ಬದಲಿ ಅರಣ್ಯ ಬೆಳೆಸಲು ವ್ಯವಸ್ಥೆಗೊಳಿಸಲಾಗುವುದೇ, ಹಾಗಿದ್ದಲ್ಲಿ ಎಲ್ಲೆಲ್ಲಿ ?

ಇ) ಮುಳುಗಡೆ ಪ್ರದೇಶದಲ್ಲಿ ವಾಸವಾಗಿದ್ದ ವನ್ಯ ಮೃಗಗಳಿಗೆ ಬದಲಿ ವ್ಯವಸ್ಥೆ ಮಾಡಲು ಸಾಧ್ಯವೇ ?

ಈ) ಮುಳುಗಡೆ ಆಗುವುದರಿಂದ ಉಂಟಾಗುವ ಪರಿಸರ ಅಸಮತೋಲನ ಬಗ್ಗೆ ಸರ್ಕಾರ ಅಧ್ಯಯನ ಮಾಡಿರುವರೆ .

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ೧ ಮುಳುಗಡೆಗೆ ೫೯೬ ಹೆಕ್ಟೇರು
೨ ಪ್ರಸಾರಣ ತಂತಿ ಎಳೆಯಲು ರಸ್ತೆ ಮತ್ತು ವಸತಿ ನಿರ್ಮಾಣಕ್ಕೆ ೧೦೪ ಹೆಕ್ಟೇರು
ಒಟ್ಟು ೭೦೦ ಹೆಕ್ಟೇರು

ಆ) ಬದಲಿ ಅರಣ್ಯ ಬೆಳೆಸಲು ವ್ಯವಸ್ಥೆ ಮಾಡಿದೆ. ಶಿವಮೊಗ್ಗ ವಿಭಾಗದ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ೭೦೦ ಹೆಕ್ಟೇರು ಅರಣ್ಯೇತರ ಜಮೀನಿನಲ್ಲಿ ಪರಿಹಾರಾತ್ಮಕ ನೆಡುತೋಪುಗಳನ್ನು ಬೆಳೆಸಲಾಗುತ್ತಿದೆ.

ಇ) ಈ ಮುಳುಗಡೆ ಪ್ರದೇಶದಲ್ಲಿ ಈಗಿರುವ ವನ್ಯ ಪ್ರಾಣಿಗಳಿಗೆ ಮುಳುಗಡೆ ಆಗುವ ಸಮಯದಲ್ಲಿ ಈ ಪ್ರದೇಶಕ್ಕೆ ಲಗತ್ತಾಗಿರುವ ಅರಣ್ಯ ಪ್ರದೇಶಕ್ಕೆ ಹೋಗಿ ನೆಲೆಸಲು ಸಾಕಷ್ಟು ಅವಕಾಶವಿದ್ದು ಆ ಜಾಗವನ್ನು ಅಭಿವೃದ್ಧಿ ಮಾಡಲಾಗುತ್ತಿದೆ.

ಈ) ಹೌದು ಭಾರತ ಸರ್ಕಾರದ ಪರಿಸರ ಇಲಾಖೆಯು ಈ ಬಗ್ಗೆ ಸೂಕ್ತ ಅಧ್ಯಯನವನ್ನು ತಜ್ಞರ ಮೂಲಕ ನಡೆಸಿ, ಅನುಮೋದನೆ ಕೊಟ್ಟಿರುತ್ತಾರೆ.

ಸೇವೆಯಲ್ಲಿದ್ದಾಗ ತೀರಿಕೊಂಡರೆ ಕುಟುಂಬದವರ ನೇಮಕಾತಿ ಬಗ್ಗೆ

೭೭೭. ಶ್ರೀ ಯು. ಭೂಪತಿ (ಸಂಡೂರು).–ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೇವೆಯಲ್ಲಿದ್ದಾಗಲೇ ತೀರಿಕೊಂಡ ನೌಕರರ ಕುಟುಂಬದ ಸದಸ್ಯರಿಗೆ ನೌಕರಿ ಒದಗಿಸಬೇಕೆಂದು ಕೋರಿ ೧೯೮೫–೮೫, ೧೯೮೫–೮೬ ಮತ್ತು ೧೯೮೬–೮೭ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು,

ಆ) ಆ ಪೈಕಿ ಅರ್ಜಿದಾರರಿಗೆ ಅನುಕಂಪ ಆಧಾರದ ಮೇಲೆ ನೌಕರಿ ನೀಡಲಾಗಿದೆಯೇ ?

ಇ) ಅರ್ಜಿ ಬಂದ ಎರಡು ತಿಂಗಳುಗಳಲ್ಲಿ ವಿಲೇವಾರಿ ಮಾಡಿದು ಅರ್ಜಿದಾರರಿಗೆ ಉತ್ತರಿಸಲೇ ಬೇಕೆಂಬ ನಿಯಮವಿದ್ದರೂ ದೀರ್ಘ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಲಕ್ಷ್ಮೀಸರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಸೇವೆಯಲ್ಲಿದ್ದಾಗಲೇ ತೀರಿಕೊಂಡ ನೌಕರರ ಕುಟುಂಬದ ಸದಸ್ಯರಿಗೆ ನೌಕರಿ ಒದಗಿಸಬೇಕೆಂದು ಕೋರಿ ಮಂಡಳಿಗೆ ಬಂದ ಅರ್ಜಿಗಳ ಸಂಖ್ಯೆ ಕೆಳಕಂಡಂತಿದೆ.

೧೯೮೪-೮೫	೨೫೧
೧೯೮೫-೮೬	೨೨೫
೧೯೮೬-೮೭	೨೪೦

ಆ) ಆನುಸಂಪದ ಆಧಾರದ ಮೇಲೆ ನೌಕರಿ ನೀಡಿದ ಬಗ್ಗೆ ವಿವರ

೧೯೮೪-೮೫	೧೫೫
೧೯೮೫-೮೬	೨೫೩
೧೯೮೬-೮೭	೧೦೮

ಇ) ಅರ್ಜಿದಾರರಿಂದ ಪೂರ್ಣ ಮಾಹಿತಿ ದೊರೆತ ನಂತರ ತ್ವರಿತವಾಗಿ ವಿಲೇವಾರಿ ಮಾಡಲಾಗುತ್ತದೆ, ಆದರೆ ಪೂರ್ಣ ಮಾಹಿತಿ ದೊರಕಿರುವ ಸಂದರ್ಭಗಳಲ್ಲೆಲ್ಲಾ ಅರ್ಜಿದಾರರಿಗೆ ನೌಕರಿ ಒದಗಿಸಿಕೊಟ್ಟಿದೆ ಉತ್ತರಿಸಲಾಗಿದೆ

ಬಳ್ಳಾರಿ ಜಿಲ್ಲೆ ಫಾರೆಸ್ಟ್ ಗಾರ್ಡ್‌ಗಳ ಆಯ್ಕೆ

೭೭೮. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅರಣ್ಯ ರಕ್ಷಕರ ನೇಮಕಾತಿಗಾಗಿ ಬಳ್ಳಾರಿಯಲ್ಲಿ ಆಯ್ಕೆ ನಡೆದಿರುವುದು ನಿಜವೇ ? ಹಾಗಿದ್ದಲ್ಲಿ ಎಷ್ಟು ಹುದ್ದೆಗಳಿಗೆ ಆಯ್ಕೆ ನಡೆದಿದೆ.

ಆ) ಈ ಆಯ್ಕೆ ಮೇರೆಗೆ ಈವರೆಗೂ ಆಜ್ಞೆ ಕಳಿಸದಿರಲು ಕಾರಣಗಳೇನು ?

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು, ಸಂದರ್ಶನ ೧೦ ಹುದ್ದೆಗಳಿಗೆ ನಡೆದಿದೆ

ಆ) ಈಗ ಮಾಡಿರುವ ಆಯ್ಕೆ ಸರ್ಕಾರದ ನೇಮಕಾತಿ ನಿಯಮಕ್ಕೆ ಅನುಸಾರವಾಗಿಲ್ಲವಾದುದರಿಂದ ಆಜ್ಞೆ ಕಳಿಸಿಲ್ಲ

ಖಾದಿ ಬೋರ್ಡಿನಿಂದ ಗುಡಿ ಕೈಗಾರಿಕೆಗಳಿಗೆ ಧನ ಸಹಾಯ

೭೮೧. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೭ರಲ್ಲಿ ಗುಡಿ ಕೈಗಾರಿಕೆಗಳ ಧನ ಸಹಾಯಕ್ಕಾಗಿ ಸರ್ಕಾರದಿಂದ ಖಾದಿ ಬೋರ್ಡಿಗೆ ಮಂಜೂರಾದ ಹಣವೆಷ್ಟು.

ಆ) ಇಲ್ಲಿಯವರೆಗೆ ಸದರಿ ಮಂಡಲಿಯವರು ವಿನಿಯೋಗಿಸಿದ ಹಣವೆಷ್ಟು.

ಇ) ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಿನ ಹಣ ವಿನಿಯೋಗವಾಗದಿರಲು ಕಾರಣಗಳೇನು ?

ಶ್ರೀ ಬಿ. ಎ. ಜೀವಿಜಯ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ೧೯೮೭-೮೮ರ ಸಾಲಿಗೆ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದಿಂದ ಗ್ರಾಮಾಂತರ ಅತಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಒಟ್ಟು ರೂ. ೫,೦೦,೫೯,೦೬೫-೦೦ (ಸಾಲ ರೂಪದಲ್ಲಿ ಸಹಾಯಧನ) ಹಾಗೂ ರಾಜ್ಯ ಸರ್ಕಾರದಿಂದ ವಿಶೇಷ ಘಟಕ ಯೋಜನೆಯಡಿಯಲ್ಲಿ ೩೦.೦೦ ಲಕ್ಷ ರೂಪಾಯಿಗಳು ಪ್ರತ್ಯೇಕವಾಗಿ ಹಿಂದುಳಿದ ಜಾತಿಯವರಿಗೆ ಮಂಜೂರಾಗಿದೆ.